3. ವಿದ್ಯಾರ್ಥಿನಿಲಯಗಳ ಪ್ರವೇಶ
4. ವಿದ್ಯಾರ್ಥಿವೇತನ ಶುಲ್ಕ ವಿನಾಯತಿ
5. ಹೆಚ್ಚುವರಿ ಭೋಜನ ವೆಚ್ಚ
6. ಬೆರಳಚ್ಚು, ಶೀಘ್ರಲಿಪಿ ತರಬೇತಿ
7. ಕಾನೂನು ತರಬೇತಿ
8. ಹೊಲಿಗೆ ತರಬೇತಿ
9. ಶ್ಯಕ್ಷಣಿಕ ಪ್ರವೇಶದಲ್ಲಿ ಮೀಸಲಾತಿ
10. ಔದ್ಯೋಗಿಕ ನೇಮಕಾತಿಯಲ್ಲಿ ಮೀಸಲಾತಿ

ಇ)ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಈ)ಕುಡುಬಿ ಜನಾಂಗದವರನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲು ಜಿಲ್ಲಾಧಿಕಾರಿಗಳು ದಕ್ಷಿಣ ಕನ್ನಡ ಜಿಲ್ಲೆ ರವರು ಶಿಫಾರಸ್ಸು ಮಾಡಿರುತ್ತಾರೆ. ಕರ್ನಾಟಕ ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗಕ್ಕೆ ಕಳುಹಿಸಿದ್ದು, ಆಯೋಗದ ವತಿಯಿಂದ ಶಿಫಾರಸ್ಸು ವರದಿ ನಿರೀಕ್ಷಿಸಿದೆ.

4796(5036) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅದಿರು ತುಂಬಿದ ಲಾರಿಗಳು ನಿಗಧಿಗೊಳಿಸಲಾದ ಮಿತಿಗಿಂತ ಅಧಿಕ ಭಾರದ ಮ್ಯಾಂಗನೀಸ್ ತುಂಬಿರುವುದಕ್ಕೆ ಸರ್ಕಾರ ನಿರ್ಬಂಧ ಹೇರಿ ಅಳತೆ ಮಾಪನ ಮಾಡುವರೇ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಂಡಿರುವುದರಿಂದ ಅದಿರು ತುಂಬಿದ ಲಾರಿಗಳು ಮಾರ್ಗ ಬದಲಿಸಿ, ಹೊಸಪೇಟೆಯಿಂದ ತೀರ್ಥಹಳ್ಳಿ ಮಾರ್ಗವಾಗಿ ಹೊಸಂಗಡಿಯಿಂದ ಸಿದ್ಧಾಪುರ ಕಂಡ್ಲೂರು, ಬಸ್ರೂರು – ಮೂರುಕೈಯಾಗಿ ಹಂಗಳೂರು ಮೂಲಕ ಮಂಗಳೂರಿಗೆ ಹೋಗುತ್ತಿದ್ದು ಇದರಿಂದ ಜನರು ಪ್ರತಿಭಟನೆಗೆ ಸಜ್ಜಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಅದಿರು ತುಂಬಿದ ಲಾರಿಗಳಿಂದಾಗಿ ಉಡುಪಿ ಜಿಲ್ಲೆಯ ಬಾರಕೂರು ಸೇತುವೆ ಮುರಿದು ಬಿದ್ದು ಸರ್ಕಾರ ಕೋಟಿಗಟ್ಟಲೆ ಹಣ ವ್ಯಯ ಮಾಡಬೇಕಾಗಿ ಬಂದ ಪ್ರಯುಕ್ತ ಕಂಡ್ಲೂರು ಸೇತುವೆಯನ್ನು ರಕ್ಷಿಸಲು ಸರ್ಕಾರ ಯಾವ ಮುಂಜಾಗರೂಕತಾ ಕ್ರಮ ಕೈಗೊಂಡಿದೆ;

ಇ) ಕಂಡ್ಲೂರು ಸೇತುವೆಯ ಮುಲಕ ಅದಿರು ತುಂಬಿದ ಲಾರಿಗಳ ಸಂಚಾರವನ್ನು ತಕ್ಷಣದಿಂದ ನಿಲ್ಲಿಸಿ ಹೊಸಂಗಡಿಯಿಂದ ಬಸ್ರೂರು ಮೂರು ಕೈವರೆಗೆ ಅದಿರು ತುಂಬಿದ ಲಾರಿಗಳ ಸಂಚಾರದಿಂದ ಹಾಳಾದ ರಸ್ತೆ ದುರಸ್ಥಿಪಡಿಸಲು ಸರ್ಕಾರ ವಿಶೇಷ ಅನುದಾನ ಬಿಡುಗಡೆ ಮಾಡಲಾಗುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಜನರ ಪ್ರತಿಭಟನೆಯ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

ಆ) ತೀರ್ಥಹಳ್ಳಿ–ಕುಂದಾಪುರ ರಾಜ್ಯ ಹೆದ್ದಾರಿ (ಸಂಖ್ಯೆ 62ರ) ಕಿ.ಮೀ.75.00 ರಲ್ಲಿರುವ ಕಂಡ್ಲೂರು ಸೇತುವೆಗೆ ಸ್ವಲ್ಪ ಮಟ್ಟಿನ ಹಾನಿಯಾಗಿದ್ದು, ಮುಂಜಾಗ್ರತಾ ಕ್ರಮವಾಗಿ ಸೇತುವೆಯ ಇಕ್ಕೆಡೆಗಳಲ್ಲಿ ಅಧಿಕ ಭಾರದ ವಾಹನಗಳ ಸಂಚಾರದ ನಿಷೇಧದ ಬಗ್ಗೆ ಎಚ್ಚರಿಕೆಯ ಸೂಚನಾ ಫಲಕಗಳನ್ನು ಅಳವಡಿಸಲಾಗಿದೆ. ಹಾಗೂ ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ಇವರ ಅಧಿಸೂಚನೆ ಸಂಖ್ಯೆ ಆರ್‌ಟಿಎಸಿ ಆರ್;93: 2004–05, ದಿನಾಂಕ 25–10–2004 ರಲ್ಲಿ ತೀರ್ಥಹಳ್ಳಿ–ಕುಂದಾಪುರ ರಾಜ್ಯ ಹೆದ್ದಾರಿಯ ಮೇಲೆ ಮ್ಯಾಂಗನೀಸ್ ಅದಿರು ಹೊತ್ತ ಲಾರಿಗಳ ಸಂಚಾರವನ್ನು ನಿಷೇಧಿಸಿ ಪ್ರತಿಬಂಧಕಾಜ್ಞೆ ಹೊರಡಿಸಿರುತ್ತಾರೆ.

ಇ) ತೀರ್ಥಹಳ್ಳಿ–ಕುಂದಾಪುರ ರಾಜ್ಯ ಹೆದ್ದಾರಿ ಕಿ.ಮೀ.37.00ರ ಮೂರುಕೈಯಡಿ ಕಿ.ಮೀ.67.00ರ ಅಂಪಾರುವರೆಗೆ 2004–05ನೇ ಸಾಲಿನಲ್ಲಿ ಕೇಂದ್ರ ರಸ್ತೆ ನಿಧಿ ಯೋಜನೆಯಡಿ ರೂ.170.00 ಲಕ್ಷದಲ್ಲಿ ಅಭಿವೃದ್ಧಿಗೊಳಿಸಲಾಗಿರುತ್ತದೆ. ಉಳಿದಂತೆ ಕಿ.ಮೀ.42.00ರಿಂದ 65.00ರ ವರೆಗೆ (ಹೊಸಂಗಡಿಯಿಂದ ಬಸ್ರೂರು ಭಾಗವನ್ನು) ಅಭಿವೃದ್ಧಿಗೊಳಿಸಲು ರಾಜ್ಯ ಹೆದ್ದಾರಿಗಳ ನಿರ್ವಹಣೆಯ ಪ್ಯಾಕೇಜ್‌ನಲ್ಲಿ ಅವಕಾಶ ಮಾಡಲಾಗಿರುತ್ತದೆ.

4797(5037) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಂದಾಯ ಇಲಾಖೆಯಲ್ಲಿ ಎಷ್ಟು ಜನ ಗ್ರಾಮ ಸಹಾಯಕರು, ಗ್ರಾಮ ಸಹಾಯಕರಾಗಿ ಎಷ್ಟು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ (ಜಿಲ್ಲಾವಾರು ವಿವರ ನೀಡುವುದು)